ಅಸಲು ದಾವೆ ಸಂಖ್ಯೆ -54/2022
ಪಿ.ಡಬ್ಲ್ಯೂ - 02
ದಿನಾಂಕಃ 21-11-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ**

ನಿಮ್ಮ ಮುಖ್ಯವಿಚಾರಣೆ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ಯಾರು ಯಾರ ಮೇಲೆ ದಾವೆಯನ್ನು ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಏನು ಪರಿಹಾರ ಕೇಳಿ ದಾವೆ ಹೂಡಿದ್ದಾರೆ ಎಂದರೆ ದಾರಿ ಸಲುವಾಗಿ ದಾವೆಯನ್ನು ಹೂಡಿದಾದರೆ. ವಾದಿಯು ದಾವಾ ಆಸ್ತಿಯನ್ನು ಯಾರಿಂದ ಖರೀದಿ ಹಿಡಿದರು ಎಂದರೆ ರಾಯಚೂರ ರವರ ಕುಟುಂಬರವರಿಂದ ಖರೀದಿ ಹಿಡಿದಿರುತ್ತಾರೆ. ಎಷ್ಟನೇ ಇಸವಿಯಲ್ಲಿ ಖರೀದಿ ಹಿಡಿದರು ಎಂದರೆ 2011 ನೇ ಇಸವಿಯಲ್ಲಿ. ನಿವೇನಾದರೂ ಆಗ ಅಲ್ಲಿ ಇದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಖರೀದಿ ಬಗ್ಗೆ ನಿಮ್ಮ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ. ಖರೀದಿ ಆಸ್ತಿಯ ಅಳತೆ ನಿಮಗೆ ಗೊತ್ತಿಲ್ಲ ಎಂದರೆ 22X 140 ಪೂಟ ಇರುತ್ತದೆ. ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದರೆ ಅವರು ಈ-ಸ್ವತ್ತು ಮಾಡಿಸಲು ಪಂಚಾಯತಿಗೆ ಬಂದಿದ್ದಾಗ ದಾಖಲೆ ನೋಡಿದ ಆಧಾರದ ಮೇಲೆ ಹೇಳುತ್ತಿದ್ದೇನೆ. ನಿವೇನಾದರೂ ದಾವಾ ಆಸ್ತಿಯ ಅಳತೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ವಾದಿಯ ದಾವಾ ಆಸ್ತಿಯ ಉತ್ತರ- ದಕ್ಷಿಣ 132 ಪೂಟ ಅಳತೆ ಇದೆ ಇದರ ಬಗ್ಗೆ ನಿಮಗೆ ಗೊತ್ತಾ ಎಂದರೆ ಇಲ್ಲ. ದಾವಾ ಆಸ್ತಿಯ ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಪೂರ್ವಕ್ಕೆಃ ಆಸ್ತಿ ನಂ. 84 ಅದು ರಾಯಚೂರ ರವರ ಆಸ್ತಿ, ಪಶ್ಚಿಮಕ್ಕೆಃ ಆಸ್ತಿ ನಂ. 82 ಅದು ರಾಯಚೂರ ರವರ ಆಸ್ತಿ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ನೀವು ಈಗ ಗ್ರಾಮ ಪಂಚಾಯತಿ ಸದಸ್ಯರು ಎಂದರೆ ಸರಿ. ನಿಮ್ಮ ಗ್ರಾಮ ಪಂಚಾಯತಿಯಲ್ಲಿ ಸದರಿ ಆಸ್ತಿಯ ಉತ್ತರಕ್ಕೆ ರಸ್ತೆ ಇದೆ ಎಂದು ನಿಮ್ಮ ಗ್ರಾಮ ಪಂಚಾಯತಿಯಲ್ಲಿ ದಾಖಲೆ ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯತಿಲ್ಲಿ ರಸ್ತೆಯ ಬಗ್ಗೆ ದಾಖಲೆಗಳು ಇರುತ್ತದೆ ಎಂದರೆ ಸರಿ. ಸಾಕ್ಷಿ ಹೇಳಲು ಬರುವ ಮುಂಚೆ ನಿವೇನಾದರೂ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತಿಯ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪರಿಶೀಲನೆ ಮಾಡಲು ನಿಮಗೆ ತೊಂದರೆ ಇರಲಿಲ್ಲ ಎಂದರೆ, ತೊಂದರೆ ಇರಲಿಲ್ಲ. ಆದರೆ ನಾವು ಗಮನಹರಿಸಿರುವುದಿಲ್ಲ.

ಈ-ಸ್ವತ್ತು ಉತಾರ ಮಾಡುವಾಗ ಆಸ್ತಿಯ ಜಾಗಕ್ಕೆ ಹೋಗಿ ಅದನ್ನು ಅಳತೆ ಮಾಡಿ ನಂತರ ಮಾಡುತ್ತಾರೆ ಎಂದರೆ ಸರಿ. ನಿವೇನಾದರೂ ಆಸ್ತಿಯ ಜಾಗಕ್ಕೆ ಹೋಗಿದ್ದೀರಾ ಎಂದರೆ ಖರೀದಿ ಕಾಗದದಲ್ಲಿ ಈ-ಸ್ವತ್ತು ನಮೂದಾಗಿದ್ದು ಆ ಪ್ರಕಾರ ಈ ಸ್ವತ್ತು ದಾಖಲೆ ಆಗಿರುತ್ತದೆ. ಮುಂದುವರೆದು ಈ ಮೊದಲೇ ಮೂಲ ಮಾಲೀಕರ ಹೆಸರಿನಲ್ಲಿ ಈ ಸ್ವತ್ತು ದಾಖಲೆ ಆಗಿತ್ತು. ದಾವಾ ಆಸ್ತಿಯ ಉತ್ತರ ದಕ್ಷಿಣಕ್ಕೆ 132 ಫೂಟ ಇದೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿನ 3 ನೇ ಪ್ಯಾರವನ್ನು ನಿವೇ ಹೇಳಿ ಬರೆಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಅತೀಕ್ರಮಣ ಮಾಡಿದ್ದಾರೆ ಎಂದು ನುಡಿದಿದ್ದು ಎಷ್ಟು ಅಳತೆಯಷ್ಟು ಅತೀಕ್ರಮಣ ಮಾಡಿದ್ದಾರೆ ಎಂದರೆ ಪೂರ್ಣ ದಾರಿಯನ್ನೇ ಅತೀಕ್ರಮಣ ಮಾಡಿರುತ್ತಾರೆ. ಉತ್ತರ ದಕ್ಷಿಣಕ್ಕೆ ಎಷ್ಟು ಅಳತೆಯ ದಾರಿ ಇದೆ ಎಂದು ಹೇಳುತ್ತೀರಿ ಎಂದರೆ ಅಳತೆಯು ನಿಖರವಾಗಿ ಗೊತ್ತಿಲ್ಲ. ಆದರೆ ದಾರಿ ಇರುವುದನ್ನು ನಾವು ನೋಡಿರುತ್ತೇವೆ. ವೈಯಕ್ತಿಕವಾಗಿ ಅಳತೆ ಮಾಡಿರುವುದಿಲ್ಲ.

ಗ್ರಾಮ ಪಂಚಾಯತಿಯವರು ಏನಾದರೂ ದಾವಾ ಆಸ್ತಿಯ ಉತ್ತರಕ್ಕೆ ರಸ್ತೆ ಮಾಡಿದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಗ್ರಾಮ ಪಂಚಾಯತಿಯವರು ಎಲ್ಲಿ ದಾರಿ ಇರುತ್ತದೆಯೋ ಅಭಿವೃದ್ಧಿ ಮಾಡುತ್ತಾರೆ ಎಂದರೆ ಸರಿ. ಮುಂದುವರೆದು ಎಲ್ಲಿ ಅವಶ್ಯಕತೆ ಇರುತ್ತದೆಯೋ ಅಲ್ಲಿ ಮಾಡುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ದಾರಿ ಇರುವುದಿಲ್ಲ ಆದ ಕಾರಣ ಅಲ್ಲಿ ಯಾವುದೇ ಅಭಿವೃದ್ಧಿ ಮಾಡಿರುವುದಿಲ್ಲ ಎಂದರೆ ಅಲ್ಲಿ ಖುಲ್ಲಾ ಜಾಗ ಇರುವುದರಿಂದ ಅಭಿವೃದ್ಧಿ ಮಾಡಿರುವುದಿಲ್ಲ.

ದಾವಾ ಆಸ್ತಿಯ ಉತ್ತರಕ್ಕೆ ಪ್ರತಿವಾದಿಯರ ಆಸ್ತಿ ನಂ. 86 ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಇರುವ ಆಸ್ತಿ ನಂ. 86 ನ್ನು 3 ನೇ ಪ್ರತಿವಾದಿಯು 2020 ರಲ್ಲಿ ಫಕ್ಕೀರಪ್ಪ ಯಲ್ಲಪ್ಪ ಕುರುಬರ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ದಾರಿಯನ್ನು ಒಳಗೊಂಡು ಮಾರಾಟ ಮಾಡಿದ್ದಾರೆ. ಸದರಿ ಖರೀದಿ ಪತ್ರವನ್ನುಏನಾದರೂ ನೀವು ನೋಡಿದ್ದೀರಾ ಎಂದರೆ ಇಲ್ಲಎಂದು ನುಡಿಯುತ್ತಾರೆ. 2020 ರಿಂದ ಫಕ್ಕೀರಪ್ಪ ಯಲ್ಲಪ್ಪ ಕುರಬರ ರವರು ಆಸ್ತಿ ನಂ. 86 ನ್ನು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಾಗ ಖುಲ್ಲಾ ಇದೆ. ಫಕ್ಕೀರಪ್ಪ ಯಲ್ಲಪ್ಪ ಕುರಬರ ಅವರು ಉತ್ತರ- ದಕ್ಷಿಣ 29 ಫೂಟ ಪೂರ್ವ ಪಶ್ಚಿಮ 77 ಫೂಟ ಜಾಗದಲ್ಲಿ ವಹಿವಾಟು ಮಾಡುತ್ತಿದ್ದರು ಇಲ್ಲ ಎಂದು

ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆಸ್ತಿ ನಂ. 82 ಮತ್ತು 83 ಆಸ್ತಿಗಳು ಒಂದಕ್ಕೊಂದು ಹೊಂದಿಕೊಂಡು ಇವೆ ಎಂದರೆ ಸರಿ. ಆಸ್ತಿ ನಂ. 82 ಮತ್ತು 83 ರ ಉತ್ತರ ದಕ್ಷಿಣದ ಅಳತೆ ಒಂದೇ ಇರುತ್ತದೆ ಎಂದರೆ 82 ರ ಬಗ್ಗೆ ನನಗೆ ಗೊತ್ತಿಲ್ಲ. 83 ರ ಅಳತೆ ಗೊತ್ತಿರುತ್ತದೆ. ಆಸ್ತಿ ನಂ. 86 ನ್ನು ಮಾರಾಟ ಮಾಡಿದ್ದು ಉಳಿಕೆ ಆಸ್ತಿ ಯಾದ 86/1 ಮತ್ತು 86 ಆಸ್ತಿಗಳು 3 ನೇ ಪ್ರತಿವಾದಿಯ ಮಾಲ್ಕಿ ಕಬ್ಜಾದಲ್ಲಿ ಇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದಿಯ 3 ರವರು ಸಲ್ಲಿಸಿದ ನಕ್ಷೆಯನ್ನು ತೋರಿಸಿದ್ದು ಅದರಲ್ಲಿ ವಿ ಪಿ ಸಿ ಆಸ್ತಿ ನಂ. 80 ನಮೂದು ಮಾಡಿದ ರೀತಿಯಲ್ಲಿ ಇದೆ ಎಂದರೆ ಸಾಕ್ಷಿಯು ಅದನ್ನು ಪರಿಶೀಲಿಸಿ ಇದೆ ಎಂದು ನುಡಿಯುತ್ತಾರೆ. ಆಸ್ತಿ ನಂ. 80 ಉತ್ತರಕ್ಕೆ 3 ನೇ ಪ್ರತಿವಾದಿಯ ಆಸ್ತಿ ಇದೆ ಎಂದರೆ ದಾರಿ ಬಿಟ್ಟು ನಂತರ ಅವರ ಆಸ್ತಿ ಇದೆ. ದಾವಾ ಆಸ್ತಿ ಉತ್ತರಕ್ಕೆ ದಾರಿ ಇಲ್ಲದೆ ಇದ್ದರು ವಾದಿಯ ಮಾತನ್ನು ಕೇಳಿಕೊಂಡು ದಾರಿ ಇದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆಸ್ತಿ ನಂ. 83 ರ ಕಡೆಯ ಭಾಗದ ಪೂರ್ವಕ್ಕೆ 15 ಫೂಟ ಅಗಲದ ರಸ್ತೆ ಇದೆ ಎಂದರೆ ಸರಿಯಲ್ಲ. ಆಸ್ತಿ ನಂ.84 ಮತ್ತು 85 ಮತ್ತು 86 ರ ನಡುವೆ ಇರುವ 15 ಫೂಟ ಅಗಲದ ರಸ್ತೆಯ ಪೂರ್ವಕ್ಕೆ ಇರುವ ರಸ್ತೆಗೆ ವಾದಿಯರು ವಹಿವಾಟು ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿಯು 3 ನೇ ಪ್ರತಿವಾದಿಯ ತಂದೆಗೆ ಮೋಸ ಮಾಡಿ ಸುಳ್ಳು ಚಕ್ಕಬಂದಿ ಮತ್ತು ಅಳತೆಯನ್ನು ತೋರಿಸಿ ಸುಳ್ಳು ಖರೀದಿ ಪತ್ರವನ್ನು ದಾಖಲಿಸಿಕೊಂಡಿದ್ದು ಈ ವಿಷಯವನ್ನು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಖರೀದಿ ಪತ್ರವನ್ನು ನಿವೇನಾದರೂ ನೋಡಿದ್ದೀರಾ ಎಂದರೆ ನೋಡಿದ್ದೇನೆ. ಎಷ್ಟು ಜನ ಸೇರಿ ಅದನ್ನು ಮಾರಾಟ ಮಾಡಿದ್ದಾರೆ ಎಂದರೆ ಒಬ್ಬರೆ ಮಾಡಿರುತ್ತಾರೆ. ಅವರು ರಾಯಚೂರ ಇರುತ್ತಾರೆ. ಅವರು ನಮ್ಮ ಊರಿನಲ್ಲಿ ಇರುವುದಿಲ್ಲ. ದಾವಾ ಆಸ್ತಿಯು ಖರೀದಿ ಕೊಡುವ ಪೂರ್ವದಲ್ಲಿ 5 ಜನರ ಹೆಸರಿನಲ್ಲಿ ಇತ್ತು ಎಂದರೆ ಸರಿ. 5 ಜನ ಸೇರಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದರೆ 5 ಜನ ಸೇರಿ ಮಾರಾಟ ಮಾಡಿದ್ದಾರೆ. ಸಾಕ್ಷಿಗೆ ನಿಪಿ- 20 ನ್ನು ತೋರಿಸಿದ್ದು ಅದರಲ್ಲಿ 5 ಜನ ಸೇರಿ ಮಾರಾಟ ಮಾಡಿದ್ದಾರೆ ಎಂದು ನುಡಿದಿದ್ದು ಅದರಲ್ಲಿ ಎಲ್ಲಿಯೂ 5 ಜನರ ಸಹಿಗಳು ಇಲ್ಲ ಎಂದರೆ ಸಾಕ್ಷಿಯು 5 ಜನರ ಪರವಾಗಿ ಒಬ್ಬರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ 5 ಜನರ ಪರವಾಗಿ ಒಬ್ಬರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಿದ್ದೀರಿ ಎಂದರೆ ಖರೀದಿ ಪತ್ರವನ್ನು ನೋಡಿರುತ್ತೇನೆ.

ವಾದಿಗೆ ಎಷ್ಟು ಜನ ಅಣ್ಣಮತಮ್ಮಂದಿರು ಎಂದರೆ 3 ಜನ ಅವರ ಹೆಸರು ವೀರಣ್ಣ, ಬಸವರಾಜ ಮತ್ತು ವಿಜಯ. ನೀವು ಬಸವರಾಜ ರವರ ಸಹಪಾಠಿ ಇದ್ದು ಜೊತೆಯಲ್ಲಿ ಓದಿರುತ್ತೀರಿ ಎಂದರೆ ಸರಿ. ಆದ ಕಾರಣ ವಾದಿಗೆ ಸಹಾಯವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.